

ಬಂಡೆಯ ಮೇಲೆ ಮೂಡಿದ ಜಾಡು

'ಶ್ಯಾನೆ'.

'ಓಕೆ ಓಕೆ'.

ಹೀಗೆ ವಿಭಿನ್ನ ಸಂಸ್ಕೃತಿಯ ಜೀವಗಳು ಒಟ್ಟಿಗೆ ಸೇರಿ ಕಲಿಕೆಯಲ್ಲಿ ತೊಡಗಿರುವಾಗ ನಾವು ತುಂಗಭದ್ರಾ ನದಿಯೊಳಗಿನ ನೈಸರ್ಗಿಕ ಶಿಲ್ಪಗಳತ್ತ ಗಮನಹರಿಸಿದೆವು.

ಅದು ತುಂಗಭದ್ರಾ ಜಲಾಶಯದ ಕೆಳ ಭಾಗದಲ್ಲಿರುವ ನದಿ ಪ್ರದೇಶ. ಈಗ ನದಿಯಲ್ಲಿ ನೀರಿನ ಹರಿವಿಲ್ಲ. ಹಾಗಾಗಿ ವಿಜಯನಗರ ಅರಸರ ಕಾಲದ ಅಣೆಕಟ್ಟುಗಳ ದಾಖಲಾತಿಗೆ ನದಿಯಲ್ಲಿ ಅಡ್ಡಾಡುತ್ತಿದ್ದೆವು. ಹುಲಿಗಿ ಬಳಿ ನದಿಯು ಸುಮಾರು ಒಂದು ಕಿ.ಮೀ. ಅಗಲವಿದೆ. ಅಲ್ಲಿ ನದಿಯ ಒಳಭಾಗಕ್ಕೆ ಹೋದಾಗ ಬಂಡೆಗಲ್ಲುಗಳ ಮೇಲೆ ಚಿತ್ರವಿಚಿತ್ರ ನೈಸರ್ಗಿಕ ಶಿಲ್ಪಗಳು ಒಡಮೂಡಿದ್ದವು. ವಿವಿಧ ಆಕಾರ, ವಕ್ರತೆಯಲ್ಲೂ ಅಗಣಿತ ಸೌಂದರ್ಯ. ಸಾವಿರಾರು ವರ್ಷಗಳಿಂದ ನೀರಿನ ಹರಿವಿಗೆ ಸಿಕ್ಕ ಕಲ್ಲುಗುಂಡುಗಳು, ಹಾಸು ಬಂಡೆಗಳು ನುಣುಪಾಗಿ ಮಿರಮಿರನೆ ಮಿಂಚುತ್ತಿದ್ದವು. ಎಳೆ ಬಿಸಿಲು ಅವುಗಳಿಗೆ ವಿಶೇಷ ಮೆರುಗು ತಂದಿತ್ತು.

ಪುಟಾಣಿ ನೀರಿನ ದೋಣೆಗಳನ್ನು ನೋಡುವುದೇ ಚೆಂದ. ಈ ದೋಣೆಗಳಲ್ಲಿ ನೀರು ನಿಂತು ಪಾಚಿ, ಹಾವಸೆಗಳು ಬೆಳೆದಿದ್ದು ಅವುಗಳು ಸ್ತಬ್ಧ ಚಿತ್ರಗಳಂತೆ ಕಂಡವು. ಹುಲಿಗಿ ಬಳಿ ನದಿಯಲ್ಲಿಯೇ ಇರುವ ಬಂಡೆಗಲ್ಲುಗಳನ್ನು ಬಳಸಿಕೊಂಡು ಕಲ್ಯಾಣಿ ಚಾಲುಕ್ಯರು ಮತ್ತು ವಿಜಯನಗರ ಅರಸರ ಕಾಲದಲ್ಲಿ ನದಿಗೆ ಅಣೆಕಟ್ಟು ಹಾಕಿದ್ದಾರೆ. ಅಣೆಕಟ್ಟು ನಿರ್ಮಾಣಕ್ಕಾಗಿ ಬಂಡೆಗಳನ್ನು ಸೀಳಿರುವ ಗುರುತುಗಳನ್ನು ಈಗಲೂ ಕಾಣಬಹುದು. ಅರೆ ಕೊರೆದಿರುವ, ಸೀಳಲು ಪ್ರಯತ್ನಿಸಿ ಹಾಗೇ ಬಿಟ್ಟಿರುವ ಬಂಡೆಗಳೂ, ಅವುಗಳ ಕುರುಹುಗಳೂ ನೋಡಲು ಆಕರ್ಷಕ.

ಹಂಪಿಗೆ ತುಸು ದೂರದಲ್ಲಿ ತುರ್ತಾ ಅಣೆಕಟ್ಟೆ ಇದೆ. ಇಲ್ಲಿ ನದಿಯು ಸುಮಾರು ಎರಡು ಕಿ.ಮೀ. ಅಗಲವಿದೆ. ಹತ್ತಾರು ನಡುಗಡ್ಡೆಗಳು, ನೀರಿನ ಕೊಳಗಳು, ವಿವಿಧ ಎತ್ತರದ ಗಿಡಮರಗಳ ವೈವಿಧ್ಯ. ಹುಲಿಗಿ ಬಳಿ ಹಾಸುಬಂಡೆಗಳ ಮೇಲೆ ನೈಸರ್ಗಿಕ ಶಿಲ್ಪಗಳಿದ್ದರೆ, ಇಲ್ಲಿ ದೊಡ್ಡ ದೊಡ್ಡ ಬಂಡೆಗಲ್ಲುಗಳ ಮೇಲೆ ಅಂತಹ ಶಿಲ್ಪಗಳನ್ನು ಕಾಣಬಹುದು. ಎಷ್ಟು ನೋಡಿದರೂ ಮುಗಿಯದ ದೃಶ್ಯಗಳು. ನಡೆನಡೆದು ಕಾಲುಗಳು ದಣಿದಿದ್ದರೂ ಬಾಯಿ ದಣಿದಿರಲಿಲ್ಲ.

'ನದೀ ಒಳಾಗಡೆ ನಮುಗೂ ಮುಂಚೆ ನಾಯಿಗಳು ಅಡ್ಡಾಡಿದಾವಲ್ಲ'– ಹಸಿ ಮಣ್ಣಿನ ಮೇಲೆ ಮೂಡಿದ್ದ ಪಾದದ ಗುರುತುಗಳನ್ನು ನೋಡಿ ಗೆಳೆಯ ಅನುಮಾನಿಸಿದ.

'ನಾಯಲ್ರೀ ಸರ, ನೀರುನಾಯಿಗಳ ಗುರುತು'.

'ಓ ನೀರ್ ನಾಯ್ ಇದಿಯಾ ಇಲ್ಲಿ'.


'ನೀರ್ನಾಯಿ, ಚಿರತೆ, ಕಾಡಂದಿ, ಕುರ್ಕ, ಕಲ್ಡಿಗುಳು ಜಗ್ಗೆದವೆ'.

ಕಾಲುಗಳು ಗಕ್ಕನೆ ನಿಂತವು. ಇದುವರೆಗೂ ಆಕರ್ಷಕವಾಗಿ ಕಾಣುತ್ತಿದ್ದ ಶಿಲ್ಪಗಳು ಕೇವಲ ಕಾಡುಗಲ್ಲುಗಳಂತೆ ಗೋಚರಿಸತೊಡಗಿದವು.


'ಏ ಬನ್ರೀ ಹೋಗನ, ರಿಸ್ಕ್ ಬೇಡ'.

ನಮಗೂ ಹೊಟ್ಟೆ ತಾಳ ಹಾಕುತ್ತಿತ್ತು. ಕಣ್ಣುಗಳು, ಕ್ಯಾಮೆರಾಗಳು, ಮೊಬೈಲುಗಳು ತುಂಬಿದ್ದವು. ವಾಪಸು ಹೊರಟೆವು. ಹಿಂದಿನ ವರ್ಷ ಮೈದುಂಬಿ ಹರಿಯುತ್ತಿದ್ದ ತುಂಗಭದ್ರೆಯನ್ನು ಕಂಡಿದ್ದೆವು, ಈ ವರ್ಷ ನೀರಿಲ್ಲದ ತುಂಗಭದ್ರೆ ನೋಡುವ ಅವಕಾಶ. ಎರಡೂ ಚಂದವೇ. ಹಂಪಿ ಆಸುಪಾಸಿನ ನದಿ ಪಾತ್ರವಂತೂ ವೈವಿಧ್ಯಗಳ ಆಗರ. ಅಡ್ಡಾಡಲು ಕಾಲುಗಳು ಗಟ್ಟಿ ಇರಬೇಕಷ್ಟೇ.

**ಪ್ರತಿಕ್ರಿಯಿಸಿ: feedback@sudha.co.in**



ನೀರಿನ ದೋಣೆಗಳು



ಕೈಚಾಚಿ ಆರಾಮ ಭಂಗಿಯಲ್ಲಿರುವ
ರುಂಡವಿಲ್ಲದ ಬಂಡೆಯ ಮುಂಡ